

ಸಲ ಆತ ಪ್ರತಿರೋಧ ಎದುರಿಸುವಂತಾಯಿತು.

‘ದೇವಣ್ಣ, ನನಗ ಸಿಟ್ಟು ಬಂತಂದ್ರ ನಿನ್ನ ಚಾದಂಗಡಿ ಸುಟ್ಟಬಿಡ್ತೇನಿ. ಬಾಟಲಿಯೊಳಗ ಪೆಟ್ರೋಲ್ ತುಂಬಿಕೊಂಡೇ ಬಂದೇನಿ. ಮಾಯೀನ್ನ ತವರುಮನಿಗೆ ಕಳಿಸಾಂವನೋ ಇಲ್ಲೋ?’ ಚಹಾ ಕಪ್ಪನ್ನು ಟೇಬಲ್ ಮೇಲೆ ಕುಕ್ಕಿದ. ಅದು ಸ್ಟೀಲ್ ಕಪ್ ಆಗಿದ್ದರಿಂದ ಒಡೆಯದೇ ಅಲ್ಲಿ ಇಲ್ಲಿ ಉರುಳುತ್ತ ಅಡುಗೆಮನೆಗೆ ಕಡೆಗೆ ಹೋಯಿತು.

‘ಅಲ್ಲೊ ಮುತ್ತಣ್ಣ, ಸಿಟ್ಟಯದಕ ಆಗ್ತಿ? ಕಳಿಸ್ತೇನಿ ತಡಿ. ಎದಕ ಅಂವಸರ ಮಾಡ್ತೀ. ಬೇಕಾದ್ರ ನೀನೇ ನಿನ್ನ ಗಾಡಿ ಮ್ಯಾಲ ಬಿಟ್ಟು ಹೋಗುವಂತೆ. ಅದಕ್ಕಿಂತ ಮೊದಲು ಸ್ವಲ್ಪ ಮಾತಾಡೋದೈತಿ ತಡಿ. ನೋಡು, ಆಕಿ ಮತ್ತು ನಾನು ಮದುವೆಯಾಗೇವಿ...’

ಅವನ ಮಾತು ಇನ್ನೂ ಮುಗಿದಿರಲಿಲ್ಲ. ಒಳಗಿನ ಅಡುಗೆ ಕೋಣೆಯಿಂದ ಉರಿಯುವ ಕೊಳ್ಳಿ ಹಿಡಿದು ಬಿರುಗಾಳಿಯಂತೆ ಬಂದ ಮಾಯಕ್ಕ ‘ನೀ ಯಾರೋ ನನ್ನ ಕರ್ಕೊಂಡು ಹೋಗಾಕ ಬಂದಾವ, ಮೂಳಾ, ಹಳೆ ಮೂಳಾ. ನೀ ಕಟ್ಟಿದ ತಾಳಿ ಆಗ ನಿನ್ನ ಕಣ್ಣ ಇದಿರಿಗೆ ಒಗದ ಬಂದೇನಿಲ್ಲೋ? ನಮ್ಮಿಬ್ಬರ ಮದುವಿ ಮುಗೀತಂತ ಎಲ್ಲರೆದುರಿಗೆ ಸಹಿ ಮಾಡಿದ್ದು ಮರೆತಹೋಗೇತೇನು? ಹೊಳ್ಳೊಳ್ಳಿ ನನ್ನ ಮುಂದ ಬರಾಕ ನಾಚ್ಕಿ ಆಗಂಗಿಲ್ಲ? ಇಂವೆಂತ ಗಂಡ ನೋಡು? ತನ್ನ ಹೆಂಡತಿನ ಮತ್ತೊಬ್ಬನ ಜೋಡಿ ಕಳಿಸಲಿಕ್ಕೆ ಹತ್ಯಾನ.’ ಆಕೆ ಮುತ್ತಪ್ಪ ಮತ್ತು ದೇವಪ್ಪನಿಗೆ ಉರಿ ಕೊಳ್ಳಿಯಿಂದ ಮುಖಕ್ಕೆ ತಿವಿಯಲು ಹೋದಳು.

ಇವಳು ತಮ್ಮ ಮುಖಕ್ಕೆ ಬೆಂಕಿ ಹಚ್ಚುವುದು ಖಾತ್ರಿಯೆಂದು ತಿಳಿದಿದ್ದ ದೇವಪ್ಪ ಸರಕ್ಕನೆ ಕೈ ಮುಂದು ಮಾಡಿ ಅವಳ ತೋಳು ಹಿಡಿದು ಕೊಳ್ಳಿಯನ್ನು ಮೂಲೆಗೆಸೆದನು. ಆಕೆ ಕೆಟ್ಟ ಧ್ವನಿಯಲ್ಲಿ ಚೀರಿದಳು. ‘ಬರ‍್ರೊ ಯಪ್ಪಾ, ನನ್ನ ಕೊಲ್ಲತಾರ ಬರ‍್ರೊ, ಏಯ್ ಶಿವು, ಈ ರಾಕ್ಷಸರನ್ನ ಜಜ್ಜೊ’, ಶಿವಣ್ಣ ಅವಳ ಮಾತಿಗೆ ಕಾದಿದ್ದವನಂತೆ ಪಡಸಾಲೆಯನ್ನು ಎರಡೇ ಹೆಜ್ಜೆ ಮಾಡಿ ತನ್ನ ಬಲಿಷ್ಠ ಮುಷ್ಟಿಯಿಂದ ಮುತ್ತಪ್ಪನ ಮುಖಕ್ಕೆ ಗುದ್ದಲು ಒಂದೇ ಹೊಡೆತಕ್ಕೆ ಅವನ ಮೂಗಿನಿಂದ ರಕ್ತ ದಳದಳ ಸೋರಿತು. ಅದನ್ನು ಲೆಕ್ಕಿಸದೆ ಕಪಾಳಕ್ಕೆ, ಕಿವಿಗೆ, ಕಣ್ಣಿಗೆ ಹೊಡೆದ. ತನ್ನ ಉದ್ದ ಕಾಲಿನಿಂದ ಮುತ್ತಣ್ಣನಿಗೆ ಒದೆಯಲು ಅವನು ಹೊರಗೆ ಹೋಗಿ ಬಿದ್ದ. ಕೊನೆಗೆ ದೇವಪ್ಪನೆ ಓಡಿಬಂದು ಶಿವಣ್ಣನನ್ನು ತಡೆದ.

‘ಶಿವಣ್ಣ ಬಿಡೋ, ಸಾಕ ಬಿಡೋ ಮಾರಾಯ, ಸತ್ತಗಿತ್ತಾನು.’ ಅಷ್ಟೊತ್ತಿಗೆ ಮತ್ತಷ್ಟು ಜನ ಕೂಡಿ ಹಾಗೂ ಹೀಗೂ ಮಾಡಿ ತಡೆದರು. ಮುಖ, ಮೂಗು, ಬಾಯಿ, ಮೊಣಕೈ ಮುಂತಾದ ಕಡೆ ರಕ್ತ ಜಿನುಗುತ್ತಿದ್ದ ಮುತ್ತಣ್ಣನನ್ನು ಎಬ್ಬಿಸಿ ನೀರು ಕುಡಿಸಿದರು. ಮಾಯಕ್ಕ ದೇವಣ್ಣನ ಜೊತೆ ಜಗಳಕ್ಕೆ ನಿಂತಿದ್ದಳು. ‘ಅಲ್ಲೋ, ನಿನ್ನ ಜೀಂವಕ್ಕ ಹೆದರಿ, ನಿನ್ನ ಆಸ್ತಿಪಾಸ್ತಿಗೆ ಹೆದರಿ ಅಂವನ ಜೋಡಿ ನನ್ನ ಕಳಿಸಲಿಕ್ಕೆ ನಿಂತಿದ್ದಿ. ನಿನ್ನ ನೋಡಿದ್ರ ನನಗ ಹೇಸಿಕೆ ಬರತೈತಿ. ಎಂಥಾ ಗಂಡ ಅದಿ ನೀನು?’ ಅಷ್ಟೊತ್ತಿಗೆ ಒಂದಿಬ್ಬರು ಹೆಂಗಸರು ಬಂದು ಮಾಯಕ್ಕನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಮುತ್ತಪ್ಪನ ಮುಖ ಒಡೆದು ರಕ್ತ ಚಿಮ್ಮಿದ್ದ ಕಡೆ ವೃದ್ಧರೊಬ್ಬರು ಅರಿಶಿನ ಹಚ್ಚಿದರು. ಒಂದು ಕ್ಷಣ ಬಿಟ್ಟು ಆ ಮುದುಕ ಮುತ್ತಪ್ಪನಿಗೆ ಜೋರಾಗಿ ಹೇಳಿದ.

‘ಏ ಮುತ್ತಪ್ಪ, ನಿನ್ನ ಸುಮ್ಮನ ಬಿಡಲಿಕ್ಕೆ ಹತ್ತೇವಿ. ಮಾಯವ್ವನ ಸುದ್ದಿ ನಿನಗ ಎದಕ ಬೇಕು? ಆಕೀ ಬ್ಯಾಡಂತ ಆವಾಗ ಜಗಳ ಮಾಡಿ ಇಬ್ಬರೂ ಸೋಡ ಚೀಟಿ ಮಾಡಿಕೊಂಡೀರಿ. ಆಕಿ ಇನ್ನೊಂದು ಮದುವಿ ಮಾಡಿಕೊಂಡ್ರ ಅದನ್ನ ಕೇಳಾಕ ನಿನಗಷ್ಟೇ ಅಲ್ಲ, ಯಾರಿಗೂ ಹಕ್ಕು ಇಲ್ಲ. ಮದುವಿಯಾಗೋದು, ಬಿಡೋದು ಆಕಿ ಮನಸು. ಆಕಿ ಹೆಂಗರ ಇರವಾಳ್ಳು. ನಿನಗೂ ಮದುವೆಯಾಗೋ ಆಸೆಯಿದ್ರ ಮತ್ತೊಬ್ಬಾಕೀನ ಹುಡುಕಿ ಮದ್ವಿ ಆಗು. ಆಕೀ ನಿನ್ನ ತಿರಸ್ಕಾರ ಮಾಡಿ ಬಾಳ ವರ್ಷ ಆತು. ಮಾಯಕ್ಕನ ತಂಟೆಗೆ ಇನ್ನೊಮ್ಮೆ ಏನಾದ್ರೂ ನೀ ಬಂದಿಯಂದ್ರ ಇಡೀ ಊರು ಒಂದ ಆಗಿ ನಿನ್ನ ಹೊಡಿತೇವಿ. ಮಾಯಕ್ಕ ಬಾಳ ಒಳ್ಳೆಯಾಕಿ ಅದಾಳು. ಶಿವಣ್ಣನೂ ನಮಗ ಬಾಳ ಬೇಕಾದಾಂವ. ಹತ್ತ ಮಂದಿ ಕೆಲಸ ಒಬ್ಬನ ಮಾಡತಾನು. ಅಂವನ್ನ ಇದರ ಹಾಕ್ಕೊಂಡ್ರ ನೀನು ಹುಟ್ಟೇ ಇಲ್ಲ ಅನ್ನಿಸಬಿಡ್ತಾನು’, ಅಜ್ಜನ ಮಾತಿಗೆ ಕೆಲವರು ದನಿಗೂಡಿಸಿದರು. ಕೈಯಲ್ಲಿ ಕಲ್ಲು ತೆಗೆದುಕೊಂಡು ಒಗೆದುಗಿಗದಾನೆಂದು ಅವರು ಅವನನ್ನೇ ಗಮನಿಸುತ್ತಿದ್ದರು. ಆತ ಏನೊಂದೂ ಮಾತನಾಡದೆ ಭರ್ ಎಂದು ಮಾಯವಾದ.

ಅವನು ಅತ್ತ ಹೋದ ನಂತರ ಮಾಯಕ್ಕ ಒಂದಿಬ್ಬರು ಹೆಂಗಸರೊಂದಿಗೆ ಒಳಗೆ ಬಂದಳು. ಅತ್ತು ಅತ್ತು ಅವಳ ಕಣ್ಣು ಕೆಂಪಗಾಗಿದ್ದವೆಂದು ಕಾಣುತ್ತದೆ. ಬಂದವಳೇ ಅಲ್ಲಿಯೇ ಟೇಬಲ್ ಮೇಲಿದ್ದ ಒಂದು ಕುಡಿಯುವ ಸ್ಟೀಲಿನ ಲೋಟವನ್ನು ತೆಗೆದುಕೊಂಡು ಮಂದಿ ನೋಡನೋಡುತ್ತಿರುವಂತೆಯೇ ಗಂಡನ ಮುಖಕ್ಕೆ ಬೀಸಿ ಒಗೆದಳು. ಆತ ಅವಳನ್ನೇ ಗಮನಿಸುತ್ತಿದ್ದನೆಂದು ಕಾಣುತ್ತದೆ. ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡನಾದರೂ ಅದು ಅವನ ಹೆಗಲಿಗೆ ಬಡಿದು, ಅಲ್ಲಿಂದ ಗೋಡೆಗೆ ಬಡಿದು, ಠಣ್, ಟಬ್ ಶಬ್ದ ಮಾಡುತ್ತ ಗಲ್ಲೆ ಟೇಬಲ್ ಕೆಳಗಡೆ ಉರುಳಾಡುತ್ತ ಬಿದ್ದಿತು. ಪುಣ್ಯಕ್ಕೆ ಹತ್ತಿರವೇ ಕುಳಿತಿದ್ದ ಮುದುಕ ಯಲ್ಲಪ್ಪನಿಗೆ ಅದು ತಾಗಲಿಲ್ಲ. ಆತ ಆ ಲೋಟವನ್ನು ಎತ್ತಿಕೊಂಡು ದೇವಣ್ಣನಿಗೆ ತಾನೂ ಒಗೆಯುವಂತೆ ಮಾಡಿ ಜೋರಾಗಿ ಬೈದ. ‘ಅಂವನ ಮುಖಕ್ಕ ಏನು ಒಗೆದರೂ ಕಡಿಮೆಯೆ ಮಾಯಕ್ಕ. ಏನಲೆ ದೇವ್ಯಾ? ಬುದ್ದಿ ಎಲ್ಲಿಟ್ಟಿ? ನಾಚಿಕೆ ಆಗಂಗಿಲ್ಲ ನಿನಗ?’ ಆ ಮಾತಿಗೆ ದೇವಣ್ಣ ಏನೂ ಹೇಳದೆ ತನಗೂ ದುಃಖವಾಗಿದೆಯೆನ್ನುವಂತೆ ಹೆಗಲ ಮೇಲಿದ್ದ ವಸ್ತ್ರದಿಂದ ಕಣ್ಣು ಒರೆಸಿಕೊಂಡ.

‘ಮುತ್ತ್ಯಾನ್ನ ಎಲುಬು ಮುರಿಯಾವಂಗ ಶಿವಣ್ಣ ಹೊಡೆದು ಕಳಿಸಿದ. ಅಂವ ಇದ್ದಿದ್ದಕ್ಕ ಮಾಯಕ್ಕ ಉಳಿದ್ಲು’, ಅಂಗಳದಲ್ಲಿ ಅವರಿವರಿಗೆ ಸುದ್ದಿ ದಾಟಿಸುತ್ತಿದ್ದ ನಾಲ್ಕೈದು ಮಂದಿ ಈಗ ಹೊಟೇಲ್ ಒಳಗಡೆ ಬಂದು ಕುಳಿತರು. ಶಿವಣ್ಣ ಇಲ್ಲದಿದ್ದರೆ ಇಲ್ಲಿ ದೊಡ್ಡ ಅನಾಹುತ ಆಗುತ್ತಿತ್ತೆಂದು ಅಲ್ಲಿದ್ದವರಿಗೆಲ್ಲ ಅನಿಸಿತು. ದೇವಣ್ಣನ ವರ್ತನೆ ಯಾರಿಗೂ ಹಿಡಿಸಲಿಲ್ಲ. ದೇವಣ್ಣನ ಸಂಜ್ಞೆಯ ಪ್ರಕಾರ ಗದಿಗೆಪ್ಪ ಅಂತಹ ನಿಡಸುಯ್ಯುವ ಮೌನದಲ್ಲಿ ಎಲ್ಲರಿಗೂ ಸುಡುಸುಡುವ ಚಹಾ ತಂದುಕೊಟ್ಟ. ಮುಖದ ಮೇಲೆ ತುಸು ಸೆರಗು ಎಳೆದುಕೊಂಡು ಮಾಯವ್ವ ಬೆಂಕಿಯಂತೆ ಕುಳಿತಿದ್ದಳು. ಮಾಯವ್ವನನ್ನು ಸಮಾಧಾನಪಡಿಸುವ ಮಾತುಗಳನ್ನು ಆಡಬೇಕಾದ ದಾರಿ ಕಾಣದೆ ಅಲ್ಲಿದ್ದವರು ನಿಟ್ಟುಸಿರು ಬಿಡುತ್ತಿದ್ದರು. ಆಕೆ ಆವಾಗಿನಿಂದ ಮೂಲೆಯಲ್ಲಿ ಕುಳಿತು ದೇವಣ್ಣನತ್ತಲೆ ನೋಡುತ್ತಿದ್ದಳು. ಅವಳ ದೃಷ್ಟಿ ತಪ್ಪಿಸಿಕೊಳ್ಳಲು ಆತ ಹೆಣಗಾಡುತ್ತಿದ್ದ. ಹೊರಗಡೆ ನೋಡುವುದು, ಒಳಗೆ ಹೋಗಿಬರುವುದು, ಗಾಜಿನ ಕಪಾಟು ಒರೆಸುವುದು